ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ದಿನಾಂಕ ೧೦ನೇ ಶುಕ್ರವಾರ ಜುಲೈ ೧೯೮೭/ ಆಷಾಢ ೧೯, ೧೯೦೮ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆಗಳು

ಮಾಜಿ ಪ್ರಧಾನಿ ಶ್ರೀ ಚೌಧರಿ ಚರಣಸಿಂಗ್‌ರ ಮಂತ್ರಿತರ ಮಾಜಿ ಸದಸ್ಯರುಗಳ ನಿಧನದ ಬಗ್ಗೆ.

ಅಧ್ಯಕ್ಷರು.—ಈಗ ಸಂತಾಪ ಸೂಚನೆ ;

ಭಾರತದ ಮಾಜಿ ಪ್ರಧಾನಿಗಳಾದ ಚರಣ್‌ಸಿಂಗ್‌ರವರು ೨೯ನೇ ಮೇ ೧೯೮೭ರಂದು ನಿಧನರಾದ ರೆಂದು ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀಯುತರು ೧೯೫೧ರಿಂದ ೧೯೬೭ರ ವರೆಗೆ ಉತ್ತರ ಪ್ರದೇಶ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು ೧೯೬೭ನೇ ಏಪ್ರಿಲ್ ರಿಂದ ೧೯೬೮ನೇ ಫೆಬ್ರುವರಿವರೆಗೆ ಮತ್ತು ೧೯೭೦ನೇ ಫೆಬ್ರುವರಿಯಿಂದ ಅಕ್ಟೋಬರ್ ವರೆಗೆ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. ೧೯೭೭ನೇ ಮಾರ್ಚ್‌ನಿಂದ ೧೯೭೮ನೇ ಜೂನ್ ವರೆಗೆ ಕೇಂದ್ರ ಗೃಹಮಂತ್ರಿಗಳಾಗಿಯೂ ೧೯೭೯ನೇ ಜನವರಿಯಿಂದ ಜುಲೈವರೆವಿಗೂ ಉಪ ಪ್ರಧಾನಿಗಳಾಗಿ ಆರ್ಥ ಖಾತೆಯನ್ನು ನಿರ್ವಹಿಸಿಕೊಂಡಿದ್ದರು. ೧೯೭೯ನೇ ಜುಲೈನಿಂದ ೧೯೮೦ನೇ ಜನವರಿವರೆವಿಗೂ ಭಾರತದ ಐದನೇ ಪ್ರಧಾನ ಮಂತ್ರಿಗಳಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಮಾನ್ಯರು ಸತತವಾಗಿ ಆರನೇ ವಿಳನೇ ಹಾಗೂ ಎಂಟನೇ ಲೋಕಸಭೆಯ ಸದಸ್ಯರಾಗಿದ್ದರು.

ಶ್ರೀ ಚರಣ್‌ಸಿಂಗ್‌ರವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ ರಾಜಕೀಯ ಮುತ್ಸದಿಯಾಗಿದ್ದು ಭಾರತದ ರಾಜಕೀಯದಲ್ಲಿ ೫೦ ವರ್ಷಗಳಿಗೂ ಹೆಚ್ಚು ಕಾಲ ಸಕ್ರೀಯವಾಗಿ ಪಾಲ್ಗೊಂಡಿದ್ದರು. ಶ್ರೀಯುತರು ರೈತರ ಹಿತಾಶಕ್ತಿಯನ್ನು ಕಾಪಾಡಲು ಹಗಲಿರುಳು ಶ್ರಮಿಸಿದುವುದರಿಂದ ರೈತರ ಬಂಧುವೆಂದು ವಿಖ್ಯಾತರಾದರು. ದೇಶದ ಹಿರಿಯ ನಾಯಕರಲ್ಲೊಬ್ಬರಾಗಿದ್ದ ಇವರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ.

ನಿಧನ ಹೊಂದಿದವರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು).

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಭಾರತದ ಮಾಜಿ ಪ್ರಧಾನ ಮಂತ್ರಿಗಳಾದಂತಹ ಮಾನ್ಯ ಚರಣ್‌ಸಿಂಗ್‌ರವರು ದೀರ್ಘ ಕಾಲದ ಅನಾರೋಗ್ಯದಿಂದ ಬಳಲಿ

ಕೆಲವು ದಿವಸಗಳ ಹಿಂದೆ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನಿಧನದಿಂದ, ನಮ್ಮ ದೇಶದ, ಯಾರನ್ನು ನಾವು ಹಳೇ ಹುಲಿಗಳೆಂದು ಕರೆಯಬಹುದಾಗಿತ್ತೋ ಅಂತಹ ಒಬ್ಬ ಹಿರಿಯ ನಾಯಕರು ನಿಂದು ಕಣ್ಮರೆಯಾಗಿದ್ದಾರೆ. ಆದರಿಂದ, ನಮ್ಮ ದೇಶಕ್ಕೆ ತುಂಬಲಾರದಂಥ ಹಾನಿಯಾಗಿದೆ. ಮಾನ್ಯ ಚೌಧರಿ ಚರಣ್‌ಸಿಂಗ್‌ರವರ ಹೆಸರನ್ನು ಎರಡು ಕಾರಣದಿಂದ ನಮ್ಮ ದೇಶದ ಜನರು ಯಾವಾಗಲೂ ನೆನಪಿನಲ್ಲಿ ಇಡುತ್ತಾರೆ ಮೊದಲನೆಯದು, ಭಾರತದ ನೈಜ ಆರ್ಥಿಕ ಪರಿಸ್ಥಿತಿ ಬಗ್ಗೆ ಹಾಗೂ ಗ್ರಾಮೀಣ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಆದ್ಯತೆಯನ್ನು ಕೊಟ್ಟಿರುವುದರ ಬಗ್ಗೆ. ಎರಡನೆಯದು, ಮುಖ್ಯವಾಗಿ ಉತ್ತರ ಭಾರತದಲ್ಲಿ ಹಿಂದುಳಿದ ವರ್ಗದವರ ಅಭಿವೃದ್ಧಿ ಬಗ್ಗೆ ಅವರು ಮಾಡಿದಂಥ ಕೆಲಸ. ಹಿಂದುಳಿದ ವರ್ಗಗಳವರ ಮನಸ್ಸಿನಲ್ಲಿ ವಿಚಾರ ಕ್ರಾಂತಿಯನ್ನು, ಒಂದು ಹೊಸ ಹಿರಿಮೆಯನ್ನು ಉತ್ತರ ಭಾರತದಲ್ಲಿ ಯಾರಾದರೂ ಮಾಡಿದ್ದರೆ ಅದು ಚೌಧರಿ ಚರಣ್‌ಸಿಂಗ್‌ರು. ಆ ಕೀರ್ತಿ ಅವರಿಗೆ ಹೋಗಬೇಕು. ನನಗೆ ಅವರ ಜೊತೆಯಲ್ಲಿ ನಿಕಟ ಸಂಪರ್ಕದಿಂದ ಕೆಲಸ ಮಾಡತಕ್ಕ ಸಂದರ್ಭ ಸಿಕ್ಕಿತ್ತು. ಅವರು ಸಂಪ್ರದಾಯವಾದಿ ಎಂದು ಬಹಳ ಜನರು ತಿಳಿದುಕೊಂಡಿದ್ದಾರೆ. ಅವರು ಸಂಪ್ರದಾಯವಾದಿ ಹೌದು. ಆದರೂ, ಕೆಲವು ವಿಚಾರಗಳಲ್ಲಿ ಅವರು ಒಬ್ಬ ಕ್ರಾಂತಿಕಾರಿಯಾಗಿದ್ದರು. ಗ್ರಾಮೀಣ ಭಾರತಕ್ಕೆ ಒಂದು ವಿಶೇಷವಾದಂಥ ಮಹತ್ವವನ್ನು ಕೊಡಬೇಕೆನ್ನುವುದು ಅವರ ಕನಸಾಗಿತ್ತು. ಭಾರತದ ಅರ್ಥ ಮಂತ್ರಿಗಳಾಗಿ ಅವರು ಮಂಡಿಸಿದ್ದಂಥ ಬಜೆಟ್‌ನಲ್ಲಿ ಈ ವಿಚಾರದ ಪ್ರತಿಬಿಂಬವನ್ನು ನಾವು ನೋಡಿದ್ದೆವು. ಅಂಥಹ ಒಬ್ಬ ವ್ಯಕ್ತಿ ನಮ್ಮಿಂದ ಅಗಲಿ ಹೋಗಿದ್ದಾರೆ. ಇದರಿಂದ ನಮ್ಮ ದೇಶಕ್ಕೆ ದೊಡ್ಡ ಹಾನಿಯಾಗಿದೆ. ಆದರೂ, ಅವರು ಯಾವ ಒಂದು ವಿಚಾರಧಾರೆಯನ್ನು ಬಿಟ್ಟು ಹೋಗಿದ್ದಾರೋ ಅದರಿಂದ ಬಹಳ ವರ್ಷಗಳವರೆಗೆ ಬಹಳ ಪ್ರಯೋಜನವಾಗುತ್ತದೆಂದು ಹೇಳಿ ನನ್ನ ಮತ್ತು ನನ್ನ ಪಕ್ಷದ ಪರವಾಗಿ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅವರಿಗೆ ಭಾಷ್ಪಾಂಜಲಿಯನ್ನು ಅರ್ಪಿಸುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕರು).—ಸನ್ಮಾನ್ಯ ಸಭಾಧ್ಯಕ್ಷರೇ, ರಾಷ್ಟ್ರದ ಒಬ್ಬ ಹಿರಿಯ ಮತ್ತು ಪೂಜ್ಯ ನಾಯಕರಾದ ಚೌಧರಿ ಚರಣ್‌ಸಿಂಗ್‌ರವರನ್ನು ಕಳೆದುಕೊಂಡಿರುವುದಕ್ಕೆ ನಾವುಗಳು ಬಹಳ ದುಃಖಿತರಾಗಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳವರು ಹೇಳಿದ ಹಾಗೆ, ಚರಣ್‌ಸಿಂಗ್‌ರವರು ಬಹಳ ದೊಡ್ಡ ಹಿರಿಯ ನಾಯಕರಾಗಿದ್ದರು.

ಅವರು ನಾನು ಕೇಳಿ ತಿಳಿದುಕೊಂಡಿರುವ ಹಾಗೆ ಮತ್ತು ಓದಿ ತಿಳಿದುಕೊಂಡಿರುವ ಹಾಗೆ, ಮಹಾತ್ಮಗಾಂಧೀಜಿಯವರ ಜೊತೆಯಲ್ಲಿ ಕೆಲಸ ಮಾಡಿದಂತಹವರು ಅಷ್ಟೇ ಅಲ್ಲದೆ ಕಾಂಗ್ರೆಸ್ ಪಕ್ಷದ ನಾಯಕರು ಕೂಡ ಆಗಿದ್ದರು. ಅನಂತರ ಅವರ ಇಚ್ಛೆಯಂತೆ ಬೇರೆ ಬೇರೆ ಪಕ್ಷಗಳನ್ನು ಕಟ್ಟಿ, ಅದರ ಮುಖ್ಯಸ್ಥರಾಗಿ ದೇಶಕ್ಕೋಸ್ಕರ ಕೆಲಸ ಮಾಡುತ್ತಾ ಇದ್ದರು. ಅವರು ಮುಖ್ಯಮಂತ್ರಿಗಳಾಗಿದ್ದು ದಷ್ಟೇ ಅಲ್ಲ, ಕೇಂದ್ರ ಸರ್ಕಾರದಲ್ಲಿಯೂ ಮುಖ್ಯ ಸ್ಥಾನಗಳನ್ನು ಹೊಂದಿದ್ದು, ಕೆಲವು ಕಾಲ ದೇಶದ ಪ್ರಧಾನಿಗಳೂ ಆಗಿದ್ದರು. ಅವರು ರೈತರ ಪರವಾಗಿ ಯಾವ ವಿಧವಾದ ಕಷ್ಟಕೋಟಲೆಗಳನ್ನಾದರೂ ಅನುಭವಿಸಿ ಅವರ ಹಿತಕ್ಕಾಗಿ ಯಾವ ಕೆಲಸ ಬೇಕಾದರೂ ಮಾಡಿಕೊಡುವುದಕ್ಕೆ ಮುಂದೆ ಬರುತ್ತಿದ್ದರು. ರೈತರಿಗೆ ಅನ್ಯಾಯವಾದಾಗ ಯಾವ ಕಷ್ಟಸುಖವಾದರೂ ಸಹಿಸಿಕೊಳ್ಳುತ್ತಿದ್ದರು ಎಂಬುದು ನಮಗೆ ತಿಳಿದಿರುವ ವಿಷಯ. ಇನ್ನೊಂದೇನೆಂದರೆ ಅವರಲ್ಲಿ ಹೆಣ್ಣುಮಕ್ಕಳು ಮನೆಯ ಒಳಗೆ ಡೆಯೇ ಇರಬಾರದು ಎನ್ನುವ ಭಾವನೆಯೂ ಇತ್ತು. ಅವರ ಪತ್ನಿಯನ್ನು ಪಾರ್ಲಿಮೆಂಟಿಗೆ ಆರಿಸಿ ಕಳುಹಿಸಿದರು. ಹೀಗೆ ಅವರಿಬ್ಬರೂ ಜೋಡಿ ಪಾರಿವಾಳಗಳ ಹಾಗೆ ಹೊರಗಡೆಯೂ ಕೆಲಸ ಮಾಡಿಕೊಂಡು ಹೋಗುತ್ತಿದ್ದರು. ಇದರಿಂದ ಅವರ ಪತ್ನಿಯವರಿಗೆ ಈಗ ಬಹಳ ದುಃಖವಾಗಿದೆ. ಅವರಿಗೆ ಈ ಅಗಲಿಕೆಯ ಕಷ್ಟ ತಡೆದುಕೊಳ್ಳಲು ಭಗವಂತನು ಶಕ್ತಿ ಕೊಟ್ಟು ಮನಸ್ಸಿಗೆ ಶಾಂತಿಯನ್ನು ಕೊಡಲಿ ಎಂದು ಪರಮಾತ್ಮನಿಗೆ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಈ ನುಡಿಮಲ್ಲಿಗೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ ಗತಿಸಿದ ಚೌಧರಿ ಚರಣ್‌ಸಿಂಗ್‌ರ ಬಗ್ಗೆ ನಮ್ಮ ದೇಶದ ಸಾಮಾನ್ಯ ಜನ ಮತ್ತು ರೈತ ಸಮುದಾಯ ಬಹಳ ದೊಡ್ಡ ಮಂತ್ರ, ಅಪಾರವಾದ ಗೌರವವನ್ನು ಇಟ್ಟಿದೆ ಎಂಬುದು ನಮಗೆಲ್ಲರಿಗೂ ತಿಳಿದಂಥ ವಿಷಯ. ಅವರ ವಿಚಾರಧಾರೆ ಧೋರಣೆಗಳು ಯಾವುದೇ ಇದ್ದರೂ ಸಹ ಅವರು ಸರ್ಕಾರ ನಡೆಸುವಾಗಲೂ ಸಹ ಅವರ

ಮುಖ್ಯ ಒತ್ತು ರೈತರ ಪರವಾಗಿತ್ತು ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ. ಹಲವಾರು ಜನ ನಮ್ಮ ದೇಶದಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ, ಪ್ರಧಾನ ಮಂತ್ರಿಗಳಾಗಿದ್ದಾರೆ, ಆದರೆ ನನಗೆ ತಿಳಿದ ಮಟ್ಟಿಗೆ ಎಲ್ಲಾ ವಿಷಯದಲ್ಲೂ ಸಹ ಗ್ರಾಮೀಣ ರೈತರಿಗೆ ನ್ಯಾಯ ಅನುಕೂಲ ಮಾಡಿಕೊಡಬೇಕೆಂಬ ಉತ್ಕಟವಾದ ಭಾವನೆ ಹೊಂದಿದ್ದ ವ್ಯಕ್ತಿಯೆಂದರೆ ಚೌಧರಿ ಚರಣ್‌ಸಿಂಗ್‌ರೊಬ್ಬರೆ. ಮಾನ್ಯ ಚರಣ್ ಸಿಂಗರು ನಮ್ಮ ದೇಶದ ರೈತಾಪಿ ಜನಕ್ಕೆ ಬೆನ್ನೆಲುಬಾಗಿದ್ದರು. ಕೃಷಿ ವಿಷಯಗಳ ಬಗ್ಗೆ ಆಳವಾದ ಅರಿವುಳ್ಳವರಾಗಿದ್ದರು. ಇವರನ್ನು ಕಳೆದುಕೊಂಡಿರುವುದರಿಂದ ನಮ್ಮ ರೈತರ ಪಾಲಿಗೆ ತುಂಬಲಾರದ ನಷ್ಟವುಂಟಾಗಿದೆ. ಯಾವುದೇ ವಿಷಯವನ್ನು ಅವರು ಮಾತನಾಡಬೇಕಾಗಿದ್ದರೂ ಅದನ್ನು ಅಮೂಲಾಗ್ರವಾಗಿ ಓದಿ ಪ್ರತಿಪಾದನೆ ಮಾಡುತ್ತಿದ್ದರು. ಅವರು ಬೇಕಾದಷ್ಟು ಪುಸ್ತಕಗಳನ್ನು ಓದುತ್ತಿದ್ದರು. ಓದದೆಯೇ ಮಾತನಾಡುವ ಜನಗಳು ನಮ್ಮ ದೇಶದಲ್ಲಿದ್ದಾರೆ. ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದಾಗಲೂ ಸ್ಮರಣೀಯವಾದ ಕೆಲಸಗಳನ್ನು ಮಾಡಿದ್ದಾರೆ. ಇಂಥ ವ್ಯಕ್ತಿಯನ್ನು ಕಳೆದುಕೊಂಡ ನಮ್ಮ ದೇಶಕ್ಕೆ ಅಪಾರವಾದ ನಷ್ಟವಾಗಿದೆ. ಅವರ ನಿಧನಕ್ಕೆ ಶ್ರದ್ಧಾಂಜಲಿಯನ್ನು ನಮ್ಮ ಪಕ್ಷದ ಪರವಾಗಿ ಅರ್ಪಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮಾಜಿ ಪ್ರಧಾನಿಗಳೂ ರಾಷ್ಟ್ರದ ಹಿರಿಯ ನಾಯಕರೂ ಆದ ಶ್ರೀ ಚೌಧರಿ ಚರಣ್‌ಸಿಂಗ್‌ರವರು ಇಂದು ನಮ್ಮನ್ನು ಅಗಲಿದ್ದಾರೆ. ಅವರು ರೈತ ಕುಟುಂಬದಿಂದ ಬಂದ ಪ್ರಪ್ರಥಮ ಪ್ರಧಾನಿಯಾಗಿದ್ದರು ಎಂದು ಹೇಳಿದರೆ ತಪ್ಪಾಗಲಾರದೆಂದು ನನಗನ್ನಿಸುತ್ತದೆ. ರೈತರ ಬಗ್ಗೆ ಬಹಳ ಕಾಳಜಿ ಇದ್ದಂತಹ ಮುಖಂಡರಾಗಿದ್ದು ಭಾರತದಲ್ಲಿ ೮೦ ಪರ್ಸೆಂಟ್ ಇರುವ ರೈತರ ಅಭಿವೃದ್ಧಿಯಾಗದೇ ಭಾರತ ಯಾವ ರೀತಿಯಲ್ಲೂ ಅಭಿವೃದ್ಧಿಯಾಗುವುದಿಲ್ಲವೆಂಬ ಸ್ಪಷ್ಟವಾದಂತಹ ವಿಚಾರೋಭಾವವಿದ್ದಂತಹ ವ್ಯಕ್ತಿ ಎಂದು ಹೇಳುವುದರ ಜೊತೆಗೆ ಗ್ರಾಮೀಣ ಅಭಿವೃದ್ಧಿಯು ಸರ್ವತೋಮುಖವಾದಿ ಆಗದಿದ್ದರೇ ಭಾರತ ಅಭಿವೃದ್ಧಿಯಾಗುವುದಿಲ್ಲವೆಂಬ ಅವರ ಕನಸು ಏನು ಇತ್ತು ಆ ಕನಸನ್ನು ನನಸನ್ನಾಗಿ ಮಾಡಲು ಇನ್ನು ಮುಂದಾದರೂ ಪ್ರಯತ್ನ ಪಡೋಣವೆಂದು ಹೇಳುತ್ತಾ ನಮ್ಮ ಪಕ್ಷದ ಪರವಾಗಿ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೇ, ಭಾರತದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದಂತಹ ಚೌಧರಿ ಚರಣ್‌ಸಿಂಗ್‌ರವರು ಇವತ್ತು ನಮ್ಮನ್ನು ಅಗಲಿದ್ದಾರೆ ಅವರ ಆತ್ಮಕ್ಕೆ ಶಾಂತಿ ಕೋರುವುದಕ್ಕೋಸ್ಕರ ನಾನು ಇಲ್ಲಿ ನಿಂತಿದ್ದೇನೆ. ಇಂತಹ ಒಂದು ಸಂದರ್ಭದಲ್ಲಿ ಅವರ ಜೀವನದಲ್ಲಿ ಮಾಡಿದಂತಹ ಸಾಹಸದ ಕಾರ್ಯವನ್ನು ಸ್ಮರಣೆ ಮಾಡಿಕೊಳ್ಳುವುದು ಸೂಕ್ತವೆಂದು ನಾನು ಭಾವಿಸಿದ್ದೇನೆ. ಶ್ರೀ ಜಯಪ್ರಕಾಶ್ ನಾರಾಯಣ್‌ರವರ ಆರೋಗ್ಯ ಸರಿಯಿಲ್ಲದೆ ಅವರು ಅನಾರೋಗ್ಯದಿಂದ ಬಳಲುತ್ತಿರುವಂತಹ ಸಂದರ್ಭದಲ್ಲಿ ಈ ದೇಶದ ಎಲ್ಲಾ ವಿರೋಧ ಪಕ್ಷಗಳನ್ನು ಒಂದು ಕಡೆ ಸೇರಿಸುವಂತಹ ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ಅವರು ಏತ್ತ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಂತಹ ಸಂದರ್ಭದಲ್ಲಿ ಬಡ್ಜೆಟ್ ಮಂಡನೆಯನ್ನು ಮಾಡುವಂತಹ ಸಂದರ್ಭದಲ್ಲಿ ರೈತರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದಂತಹ ವ್ಯಕ್ತಿ. ಹಗಲೂ ರಾತ್ರಿ, ಅವರ ಮಾತಿನಲ್ಲಿ ಈ ದೇಶದಲ್ಲಿ ವಾಸ ಮಾಡುವಂತಹ ರೈತ ನೆಮ್ಮದಿಯಿಂದ ಜೀವನ ಮಾಡಬೇಕೆನ್ನುವಂತಹ ಅಭಿಪ್ರಾಯವಿರುತ್ತಿತ್ತು. ಅಂತಹ ವ್ಯಕ್ತಿ ನಮ್ಮನ್ನು ಅಗಲಿದರು ಎಂದರೆ ಅದು ಈ ದೇಶದ ಜನತೆಯ ದೌರ್ಭಾಗ್ಯವೆಂದು ನಾನು ಭಾವಿಸಿದ್ದೇನೆ. ಅವರು ಯಾವ ದೃಷ್ಟಿಕೋನವನ್ನು ಇಟ್ಟುಕೊಂಡು ಈ ದೇಶದ ರಾಜಕಾರಣದಲ್ಲಿ ಕೆಲಸ ಮಾಡಿದರೋ ಅದು ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿದೆ. ಆ ದಿಕ್ಕಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ನಾವು ಅವರಿಗೆ ಅರ್ಪಿಸಿದ ಶ್ರದ್ಧಾಂಜಲಿ ಸಾರ್ಥಕವಾಗುತ್ತದೆಂದು ನಾನು ಭಾವಿಸುತ್ತೇನೆ. ನನ್ನ ಪರವಾಗಿ ಹಾಗೂ ನಮ್ಮ ಪಕ್ಷದ ಪರವಾಗಿ ಅವರ ಆತ್ಮಕ್ಕೆ ಶಾಂತಿ ಕೋರುತ್ತಾ ಇವರ ಅಗಲಿಕೆಯ ನೋವನ್ನು ತಡೆದುಕೊಳ್ಳುತಕ್ಕಂತಹ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತಾ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು.—ನಿಧನ ಹೊಂದಿದ ಮಾನ್ಯ ಚರಣ್‌ಸಿಂಗ್‌ರವರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು).

ಅಧ್ಯಕ್ಷರು.—ಈ ಕೆಳಕಂಡ ಮಾಜಿ ಸದಸ್ಯರುಗಳು ನಿಧನರಾದರೆಂದೂ ಸಭೆಗೆ ತಿಳಿಸಲು ವಿಷಾಧಿಸುತ್ತೇನೆ.

೧. ಮಾಜಿ ಶಾಸಕರಾದ ಶ್ರೀ ಎಫ್. ಎಂ. ಹಸಬಿ ಇವರು ದಿನಾಂಕ ೧೩-೪-೧೯೮೭ರಂದು ನಿಧನರಾದರು. ಶ್ರೀಯುತರು ೧೯೬೨ರಿಂದ ೧೯೬೭ರ ತನಕ ವಿಧಾನ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೨. ಮಾಜಿ ಶಾಸಕರಾದ ಶ್ರೀ ಬಿ. ಬಿ. ಸಯನೇಕರವರು ದಿನಾಂಕ ೨೮-೪-೧೯೮೭ರಂದು ನಿಧನರಾದರು. ಶ್ರೀಯುತರು ಐದು ಹಾಗೂ ಆರನೇ ವಿಧಾನಸಭಾ ಸದಸ್ಯರಾಗಿ ಸಕ್ರಿಯವಾಗಿ ಸಂಸದೀಯ ವ್ಯವಹಾರಗಳಲ್ಲಿ ಪಾಲ್ಗೊಂಡು ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೩. ಮಾಜಿ ರಾಜ್ಯ ಸಚಿವರಾದ ಶ್ರೀ ಧೈರ್ಯಶೀಲರಾವ್ ಪವಾರ್ ಇವರು ದಿನಾಂಕ ೫-೫-೧೯೮೭ರಂದು ನಿಧನರಾದರು. ಶ್ರೀಯುತರು ಮೂರು ಸಾಲ್ಕು ಹಾಗೂ ಆರನೆಯ ವಿಧಾನಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ೨೯-೫-೧೯೬೭ರಿಂದ ೨೭-೩-೧೯೭೧ರ ವರೆಗೆ ಉಪ ಮಂತ್ರಿಗಳಾಗಿ ಮತ್ತು ೨೫-೨-೧೯೭೮ರಿಂದ ೮-೧-೧೯೮೦ರ ವರೆಗೆ ರಾಜ್ಯ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರು ಆಗ್ರೋ ಇಂಡಸ್ಟ್ರೀಸ್ ನಿಗಮದ ಅಧ್ಯಕ್ಷರಾಗಿಯೂ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೪. ಮಾಜಿ ಶಾಸಕರಾದ ಶ್ರೀ ಕೆ. ಎನ್. ವೀರಪ್ಪಗೌಡ ಇವರು ದಿನಾಂಕ ೧೭-೬-೧೯೮೭ರಂದು ನಿಧನರಾದರು. ಮಾನ್ಯರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಗಣನೀಯವಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ನಾಲ್ಕನೆಯ ಮತ್ತು ಐದನೆಯ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರುಗಳ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು).

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

ಸಭೆಯು ೧೧-೨೦ ಗಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.